Misc 5/20 PW1

ದಿನಾಂಕ **23.12.2020** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು</u> **:** ಎದುರುದಾರರ ಪರಃ ಶ್ರೀ ಎಸ್ ಎಸ್ ಎ ವಕೀಲರಿಂದ

ನನಗೆ ಕನ್ನಡ ಭಾಷೆ ಅಷ್ಟಾಗಿ ಬರುವುದಿಲ್ಲ. ನಾನು ಬೀಡ ಅಂಗಡಿ ಉದ್ಯೋಗವನ್ನು ಮಾಡಿಕೊಂಡು ಬರುತ್ತಿದ್ದೇನೆ. ನಾನು **40** ವರ್ಷಗಳಿಂದ ಗುಜರಾತಿನಲ್ಲಿ ವಾಸಮಾಡಿಕೊಂಡಿರುತ್ತೇನೆ. ನಾನು ಊರಿಗೆ ಬಂದು ಹೋಗಿ ಮಾಡುತ್ತಿರುತ್ತೇನೆ. ನಾನು ಪ್ರಸ್ತುತ **6** ತಿಂಗಳ ಹಿಂದೆ ಊರಿಗೆ ಬಂದಿರುತ್ತೇನೆ. ನಾನು ಲಿಖಿತ ಹೇಳಿಕೆಯಲ್ಲಿ ತಿಳಿಸಿದ ಸ್ಥಿರಾಸ್ತಿಯನ್ನು ಮೂಲ ದಾವೆ ಸಂಖ್ಯೆ **104/18** ರಲ್ಲಿನ ಪ್ರತಿವಾದಿ **4** ರಿಂದ **6** ರವರಿಂದ ಖರೀದಿಸಿರುತ್ತೇನೆ. ಆಸ್ತಿಯನ್ನು ಕ್ರಯವರೆಸಿಕೊಳ್ಳುವಾಗ ಅಳತೆ ಮಾಡಿಸಿರುತ್ತೇನೆ. ಕ್ರಯವರೆಸಿದ ನಂತರ ಜಾಗವನ್ನು ಪ್ಲಾಟಿಂಗ್ ಮಾಡಲಾಗಿರುತ್ತದೆ. ಆ ರೀತಿ ಪ್ಲಾಟಿಂಗ್ ಮಾಡಿದ ನಂತರ ಖರೀದಿಸಿದ ಜಾಗದ ಚೆಕ್ಕು ಬಂಧಿ ಕುರಿತು ಸರ್ವೆ ಮಾಡಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ.

**2.** ನಾನು **3** ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಆ ರೀತಿ ಪ್ಲಾಟಿಂಗ್ ಮಾಡಿದ ನಂತರ ಸರ್ವೆ ಮಾಡಿಸಲು ಅರ್ಜಿ ನೀಡಿದ ಬಗ್ಗೆ ಹಾಗೂ ಮೋಜಿನಿದಾರರು ಜಾಗಕ್ಕೆ ಭೇಟಿ ನೀಡಿದ ಕುರಿತು ನನಗೆ ನೆನಪಿಲ್ಲ. ಆ ರೀತಿ ನಮ್ಮ ಜಾಗವನ್ನು ಪ್ಲಾಟಿಂಗ್ ಮಾಡಿದ ನಂತರ ಸರ್ವೆ ಮಾಡಿಸಲು ಯಾವುದೇ ಅರ್ಜಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪ್ಲಾಟಿಂಗ್ ಮಾಡಿದ ನಂತರ ಸರ್ವೆ ಮಾಡಿಸಿದ್ದೀರಿ ಎಂದು ತೋರಿಸಲು ದಾಖಲೆಗಳು ಇವೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ನನಗೆ ಜಮೀನನ್ನು ಮಾರಾಟ ಮಾಡಿದ ಮಾಲೀಕರಿಗೆ ಬಂದಂತಹ ಡಿಕ್ರಿ ಆದೇಶ ಮತ್ತು ಅದಕ್ಕೆ ಲಗತ್ತಿಸಿದ ನಕ್ಷೆಯನ್ನು ಒಪ್ಪಿಕೊಳ್ಳುತ್ತೇನೆ.

**3.** ನಮ್ಮ ಜಾಗದ ಪ್ಲಾಟಿಂಗ್ ಆದನಂತರ ವಾದಿಯು ಉಡುಪಿಯ ಭೂ ದಾಖಲೆಗಳ ಉಪನಿರ್ದೇಶಕರಿಗೆ ರದ್ದುಪಡಿಸುವಂತೆ ಕೋರಿ ಮೇಲ್ಮನವಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಪ್ಲಾಟಿಂಗ್ ನಕ್ಷೆಯು ಡಿಕ್ರಿಯಲ್ಲಿ ಮಾಡಲಾಗಿದ್ದಂತಹ ನಕ್ಷೆಗೆ ವ್ಯತಿರಿಕ್ತವಾಗಿದೆ ಎಂದು ವಜಾಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಡಿಕ್ರಿ ನಕ್ಷೆ ಅನುಸಾರ ಸ್ವಾಧೀನವನ್ನು ಹೊಂದಿರದೆ ದಾವಾ ಬಿ ಅನುಸೂಚಿ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿರುತ್ತೇವೆ ಎಂದು ಪ್ಲಾಟಿಂಗ್

ನಕ್ಷೆಯನ್ನು ವಜಾ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಮೂಲ ದಾವೆ ಸಂಖ್ಯೆ **104/18** ರ ವಾದಿಯು ಯಾವೆಲ್ಲ ದಾಖಲೆಗಳನ್ನು ಹಾಜರುಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಮೂಲ ದಾವೆ ಸಂಖ್ಯೆ **104/18** ರ ವಾದಿಯು ಯಾವ ಪರಿಹಾರ ಕೇಳಿ ದಾವೆ ದಾಖಲಿಸಿರುತ್ತಾರೆ ಎಂದು ತಿಳಿದುಕೊಂಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ರಸ್ತೆಯ ಯಾಥಾಸ್ಥಿತಿಯನ್ನು ಕಾಪಾಡುವಂತೆ ಪರಿಹಾರ ಕೇಳಿ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಉಡುಪಿ ರವರು  ಪ್ಲಾಟಿಂಗ್ ನಕ್ಷೆಯನ್ನು ವಜಾ ಮಾಡಿದ ನಂತರ ಮಾಡಲಾದ ಮರು ಪ್ಲಾಟಿಂಗ್ ನಕ್ಷೆಯು ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಸದ್ರಿ ಮರು ಪ್ಲಾಟಿಂಗ್ ನಕ್ಷೆ ಸರಿ ಇರುವುದಿಲ್ಲ ಎಂದು ಪುನಃ ಮೇಲ್ಮನವಿ ಸಲ್ಲಿಸಿದ್ದು ಮತ್ತು ನಾನು ಸದ್ರಿ ಪ್ರಕರಣದಲ್ಲಿ ಒಬ್ಬ ಪಕ್ಷಗಾರನಾಗಿದ್ದು ಹಾಗೂ ಅದರಲ್ಲಿ ನನಗೆ ನೋಟಿಸು ಜಾರಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ನೋಟಿಸು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಉಡುಪಿ ರವರು ಸದ್ರಿ ಮರು ಪ್ಲಾಟಿಂಗ್ ನಕ್ಷೆಯು ಸರಿ ಇರುವುದಿಲ್ಲ ಎಂದು ಆದೇಶ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**4.** ನನ್ನ ಮುಖ್ಯ ವಿಚಾರಣೆಯ ಶಪಥಪತ್ರದಲ್ಲಿ ಕಾಣಿಸಿದ ವಿಳಾಸವು ನನ್ನ ವಿಳಾಸವಾಗಿರುತ್ತದೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಉಡುಪಿ ರವರು ಶಪಥ ಪತ್ರದಲ್ಲಿನ ನನ್ನ ವಿಳಾಸಕ್ಕೆ ನೋಟಿಸು ಜಾರಿ ಮಾಡಿದ್ದರೂ ಯಾವುದೇ ನೋಟಿಸು ಬಂದಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಸದ್ರಿ ಸಮಯದಲ್ಲಿ ಗುಜರಾತಿನಲ್ಲಿ ಇದ್ದೆ ಎಂದು ನುಡಿಯುತ್ತಾರೆ. ನನಗೆ ಮಾರಾಟ ಮಾಡಿದ ಮಾಲೀಕರೊಂದಿಗೆ ಒಳ್ಳೆಯ ವಿಶ್ವಾಸದಲ್ಲಿದ್ದೇನೆ. ಅವರುಗಳು ಜಾಗದ ವಿಚಾರದ ಕುರಿತು ಯಾವುದೇ ವಿಷಯಗಳನ್ನು ಹಂಚಿಕೊಳ್ಳುವುದಿಲ್ಲ.  ಸದ್ರಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಉಡುಪಿ ರವರು ಮರು ಪ್ಲಾಟಿಂಗ್ ನಕ್ಷೆಯನ್ನು ವಜಾ ಮಾಡಿದ ಆದೇಶದ ಪ್ರತಿಯು ನನಗೆ ಖುದ್ದಾಗಿ ಜಾರಿಯಾಗಿದ್ದು ಮತ್ತು ಆ ಕುರಿತು ನನ್ನ ಮಾರಾಟಗಾರರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

**5.** ನನ್ನ ಜಾಗದ ಪ್ಲಾಟಿಂಗ್ ನಕ್ಷೆಗಳನ್ನು ಡಿಕ್ರಿಯ ನಕ್ಷೆಯಲ್ಲಿ ಕಾಣಿಸಿದ ರಸ್ತೆಯನ್ನು ಅತಿಕ್ರಮಿಸಿರುವುದಾಗಿ ವಜಾಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನೀವು ನಿಮ್ಮ ಕ್ರಯಚೀಟಿಗೆ ಲಗತ್ತಿಸಿದ ನಕ್ಷೆ ಅಥವಾ  ಡಿಕ್ರಿಗೆ ಲಗತ್ತಿಸಿದ ನಕ್ಷೆ ಆಧಾರದ ಮೇಲೆ ಸಾಧನೆ ಮಾಡುತ್ತಿದ್ದೀರಾ

ಎನ್ನುವ ಪ್ರಶ್ನೆಗೆ ಸಾಕ್ಷಿಯು ಎರಡು ನಕ್ಷೆಗಳ ಆಧಾರದ ಮೇರೆಗೆ ಸಾಧನೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎರಡನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ